KACM010010622021

Presented on : 04-05-2021
Registered on : 04-05-2021
Decided on : --
Duration :

**IN THE COURT OF**
**ADDL DISTRICT AND SESSIONS JUDGE CHIKMAGALUR**
**AT Chikmagalur,CHIKMAGALUR**
**(Presided Over by B PUSHPANJALI)**

**SC/87/2021**

**Exhibit No.**

Complainant(PROSECUTION):

State by Sakharayapatna Police, Rept. by The Public Prosecutor, Chikkamagaluru.

**VERSUS**

Accused:
Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM
Age: 33
Occupation :
R/o Machagondanahalli Village, S.K. Patna Hobli, Kadur Taluk, CKM

---------------------------------------------------------------------------

APP for State Complainant}: Public Prosecutor,
Advocate for I.S. THEJASVI appearing for Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM Advocate appearing for , respectively.

---------------------------------------------------------------------------

**Offence punishable under :**
**Sec.302, of INDIAN PENAL CODE,**

# 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು

**<u>ಸತ್ರ ಮೊಕದ್ದಮೆ ಸಂಖ್ಯೆಃ 87/2021</u>**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ರಾಜಪ್ಪ | **ಪಿ.ಡಬ್ಲ್ಯೂ** | 03 |
| **ತಂದೆಯ ಹೆಸರು** | ಮಹಲಿಂಗಪ್ಪ | **ಸಿ.ಡಬ್ಲ್ಯೂ** | 15 |
| **ವಯಸ್ಸು** | 60 ವರ್ಷ | | |
| **ಉದ್ಯೋಗ** | ವ್ಯವಸಾಯ | | |
| **ವಾಸಸ್ಥಳ** | ಮಾಚಗೊಂಡನಹಳ್ಳಿ, ಕಡೂರು ತಾಃ | | |

**<u>ಆರೋಪಿಯನ್ನು ಚಿಕ್ಕಮಗಳೂರು ಜಿಲ್ಲಾ ಕಾರಾಗೃಹದಿಂದ ವಿ.ಸಿ. ಮೂಲಕ ಹಾಜರು ಪಡಿಸಿರುತ್ತಾರೆ</u>**

**ದಿಃ 10-08-2022 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

1. **ನನಗೆ ಚಾಸಾ.5 ಮತ್ತು 19 ರವರ ಗೊತ್ತು. ಮೃತ ತಮ್ಮಯ್ಯ ಮತ್ತು ಈಗ ನ್ಯಾಯಾಲಯದ ಮುಂದೆ ವಿ.ಸಿ. ಮೂಲಕ ಕಾಣುತ್ತಿರುವ ಆರೋಪಿ ಗೊತ್ತು.**

2. **ಈಗ ನೋಡುತ್ತಿರುವ ನೋಟೀಸ್ ಮತ್ತು ಮಹಜರಿನಲ್ಲಿ ನನ್ನ ಸಹಿ ಇರುತ್ತದೆ. ಸದರಿ ನೋಟೀಸ್ ಮತ್ತು ಮಹಜರನ್ನು ಕ್ರಮವಾಗಿ ನಿಶಾನೆ ಪಿ.12 ಮತ್ತು ಪಿ.13 ಎಂದು ಮತ್ತು ಅವುಗಳ ಮೇಲೆ ಸಾಕ್ಷಿ ಗುರುತು ಹಿಡಿದ ತಮ್ಮ ಸಹಿಯನ್ನು ನಿಶಾನೆ ಪಿ.12(ಎ) ಮತ್ತು ಪಿ.13(ಎ) ಎಂದು ಗುರುತಿಸಲಾಯಿತು. ಕಳೆದ ವರ್ಷ ಜನವರಿ 22 ನೇ ತಾರೀಕಿನಂದು ನಿಶಾನೆ**

ಪಿ.12 ಮತ್ತು ಪಿ.13 ಗಳಿಗೆ ಕಡೂರು ವೃತ್ತ ನಿರೀಕ್ಷಕರ ಕಛೇರಿಯಲ್ಲಿ ರುಜು ಮಾಡಿರುತ್ತೇನೆ. ನನ್ನ ಜೊತೆ ಚಾಸಾ.5 ರುಜು ಮಾಡಿರುತ್ತಾರೆ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿಲ್ಲ. ಈಗ ನೋಡುತ್ತಿರುವ ಸೀಲ್ ಮಾಡಿರುವ ವಸ್ತುಗಳ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತವೆ. ಸದರಿ 5 ಸೀಲ್ ಮಾಡಿರುವ ವಸ್ತುಗಳ ಕವರುಗಳನ್ನು ಕ್ರಮವಾಗಿ ಮು.ಮಾ.1 ರಿಂದ 5 ಮತ್ತು ಅವುಗಳ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಸಾಕ್ಷಿ ಗುರುತು ಹಿಡಿದ ಸಹಿಯನ್ನು ಮು.ಮಾ.1(ಎ) ಮತ್ತು ಮು.ಮಾ.5(ಎ) ಎಂದು ಗುರುತಿಸಲಾಯಿತು. ಮು.ಮಾ.1 ರಿಂದ 5 ನ್ನು ನಮ್ಮ ಸಮಕ್ಷಮ ಚಾಸಾ.19 ರವರು ಹಾಜರು ಮಾಡಿದರು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಐ.ಎಸ್.ಟಿ. ವಕೀಲರಿಂದಃ</u>

3. ನಾನು ಮತ್ತು ಚಾಸಾ.5 ರವರು ಕೇಸು ಏನಾಗಿದೆ ಎಂದು ತಿಳಿಯಲು ಪೊಲೀಸ್ ಠಾಣೆಗೆ ನಾವೇ ಹೋಗಿದ್ದೆವು. ಮೃತರು ನನ್ನ ದೊಡ್ಡಪ್ಪನ ಮಗ. ನಾವು ಹೋದಾಗ ಮು.ಮಾ.1 ರಿಂದ 5 ಇವುಗಳು ವೃತ ನಿರೀಕ್ಷಕರ ಕಛೇರಿಯಲ್ಲೇ ಇತ್ತು. ಮು.ಮಾ.1 ರಿಂದ 5 ರ ಒಳಗೆ ಏನು ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ರುಜುವನ್ನು ಪಡೆದುಕೊಂಡಿರುವುದನ್ನು ಬಿಟ್ಟರೆ ಪೊಲೀಸರು ನನಗೆ ಬೇರೆ ಮಾಹಿತಿ ಹೇಳಿಲ್ಲ. ಚೀಟಿಯ ಮೇಲೆ ರುಜು ಪಡೆದಿರುವುದು ಬಿಟ್ಟರೆ ಬೇರೆ ಏನು ನನಗೆ ಗೊತ್ತಿಲ್ಲ ಮತ್ತು ಈ ದಿನವೇ ಆ ಚೀಟಿಗಳನ್ನು ನೋಡುತ್ತಿದ್ದೇನೆ ಎಂದರೆ ಸರಿ. ನಿಪಿ.13 ರ ಮಾಹಿತಿ ನನಗೆ

**ಗೊತ್ತಿಲ್ಲ. ಆರೋಪಿ ಪಾಲು ಕೇಳಲು ಬರುತ್ತಾನೆ ಎಂದು ಆತನಿಗೆ ತೊಂದರೆ ಕೊಡಲು ಯಾವುದೇ ಮಾಹಿತಿ ಇಲ್ಲದಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.**

**<u>ಮರು ವಿಚಾರಣೆಃ</u> ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).**

**ಓ ಹೇ ಕೇ ಸ ಇ ಎ ಒ**
**ಸಹಿ/-**

**(ಬಿ.ಪುಷ್ಪಾಂಜಲಿ)**
1 **ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಮಗಳೂರು.**

ರೂ.

Visit **ecourts.gov.in** for updates or download mobile app “**eCourts Services**” from Android or iOS